aurigo

## India's First Construction ERP lab inaugurated by NICMAR, Aurigo and Microsoft

# ಭಾರತದ ಮೊಟ್ಟಮೊದಲ ಕಟ್ಟಡ ನಿರ್ಮಾಣ ಇಆರ್‌ಪಿ ಪ್ರಯೋಗಾಲಯಗಳ ಉದ್ಘಾಟನೆ




ಬೆಂಗಳೂರು, ಅಕ್ಟೋಬರ್ 2010 :- ಭಾರತದ ಮೊಟ್ಟಮೊದಲ ಕಟ್ಟಡ ನಿರ್ಮಾಣ ಇಆರ್‌ಪಿ ಪ್ರಯೋಗಾಲಯವನ್ನು ರಾಷ್ಟ್ರೀಯ ಕಟ್ಟಡ ನಿರ್ಮಾಣ, ನಿರ್ವಹಣೆ ಮತ್ತು ಸಂಶೋಧನಾ ಸಂಸ್ಥೆ(ನಿಖ್‌ಮಾರ್), ಆರಿಗೋ ಸಾಫ್ಟ್‌ವೇರ್ ಟೆಕ್ನಾಲಜೀಸ್ ಮತ್ತು ಮೈಕ್ರೋಸಾಫ್ಟ್ ಒಂದಾಗಿ ಪುಣೆಯ ನಿಖ್‌ಮಾರ್‌ನ ಕ್ಯಾಂಪಸ್‌ನಲ್ಲಿ ಆರಂಭಿಸಿವೆ. ಇತರೆ ಯಾವುದೇ ನಿರ್ಮಾಣ ಪ್ರಯೋಗಾಲಯಕ್ಕೆ ಇದು ಗುಣಮಟ್ಟದ ಹೆಗ್ಗುರುತಾಗಿದೆ.

ಇದರೊಂದಿಗೆ ನಿಖ್‌ಮಾರ್‌ನ ಹೈದ್ರಾಬಾದ್ ಮತ್ತು ಗೋವಾ ಕ್ಯಾಂಪಸ್‌ಗಳಲ್ಲಿ ಇಆರ್‌ಪಿ ಪ್ರಯೋಗಾಲಯಗಳನ್ನು ಶೀಘ್ರದಲ್ಲಿಯೇ ಆರಂಭಿಸಲಾಗುವುದು.

ಕಳೆದ ವರ್ಷ ಆರಿಗೊ ಮೈಕ್ರೋಸಾಫ್ಟ್‌ನ ಸಹಯೋಗದಲ್ಲಿ ನಿಖ್‌ಮಾರ್‌ಗೆ ಸಾಫ್ಟ್‌ವೇರ್ ಬೆಂಬಲ ಪೂರೈಸುವುದಾಗಿ ಪ್ರಕಟಿಸಿತ್ತು. ಆರಿಗೋನ ಸಿಪಿಎಂಎಸ್‌ಗೆ ಉಚಿತ ಲೈಸೆನ್ಸ್‌ನ್ನು ನಿಖ್‌ಮಾರ್‌ಗೆ ನೀಡಿವೆ. ವೆಬ್ ಆಧಾರಿತ ಕಟ್ಟಡ ನಿರ್ವಹಣೆ ಮತ್ತು ತಪಾಸಣೆ ಸಾಫ್ಟ್‌ವೇರ್ ಇದಾಗಿದೆ. ಮೈಕ್ರೋಸಾಫ್ಟ್ ಡೈನಾಮಿಕ್ಸ್ ಎಎಕ್ಸ್ ಇಆರ್‌ಪಿ ಸಾಫ್ಟ್‌ವೇರ್‌ಗೂ ಉಚಿತ ಲೈಸೆನ್ಸ್ ನೀಡಲಾಗಿದೆ. ಇಆರ್‌ಪಿ ಸಾಫ್ಟ್‌ವೇರ್‌ನ್ನು ಪ್ರಾಜೆಕ್ಟ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕೋರ್ಸ್, ಅಡ್ವಾನ್ಸ್ಡ್ ಕನ್‌ಸ್ಟ್ರಕ್ಷನ್ ಮ್ಯಾನೇಜ್‌ಮೆಂಟ್ ಕೋರ್ಸ್, ರಿಯಲ್ ಎಸ್ಟೇಟ್ ಅರ್ಬನ್ ಇನ್ಫ್ರಾಸ್ಟ್ರಕ್ಚರ್ ಮ್ಯಾನೇಜ್‌ಮೆಂಟ್ ಅಂಡ್ ಪ್ರಾಜೆಕ್ಟ್ ಅಕೌಂಟಿಂಗ್‌ನ ಪಠ್ಯಕ್ರಮದಲ್ಲಿ ಸೇರಿಸಲಾಗಿದೆ.

ನಿಖ್‌ಮಾರ್‌ನ ವಿದ್ಯಾರ್ಥಿಗಳಿಗೆ ಕಟ್ಟಡ ನಿರ್ಮಾಣ ಕ್ಷೇತ್ರದ ಅತ್ಯುತ್ತಮ ಪರಿಹಾರಕ್ಕೆ ಸಂಪರ್ಕ ಕಲ್ಪಿಸುವುದು ಈ ಆರಿಗೊ ಮತ್ತು ಮೈಕ್ರೋಸಾಫ್ಟ್‌ನ ಸಾಫ್ಟ್‌ವೇರ್ ಅನುದಾನದ ಉದ್ದೇಶವಾಗಿದೆ. ಈ ಇಆರ್‌ಪಿ ಪರಿಹಾರವನ್ನು ಅನೇಕ ಜಾಗತಿಕ ಯೋಜನೆಗಳಲ್ಲಿ ವಿಶ್ವದ ಎಲ್ಲೆಡೆ ಅಳವಡಿಸಲಾಗಿದೆ.

ನಿಕ್‌ಮಾರ್ ಭಾರತೀಯ ಕಟ್ಟಡ ನಿರ್ಮಾಣ ಕೈಗಾರಿಕೆ ಸ್ಥಾಪಿಸಿದ ಮುಂಚೂಣಿಯ ಶೈಕ್ಷಣಿಕ ಸಂಸ್ಥೆಯಾಗಿದೆ. ಇದು. ಲಾಭರಹಿತ, ಸ್ವಾಯತ್ತ, ಸರಕಾರೇತರ ಶಿಕ್ಷಣ ಸಂಸ್ಥೆಯಾಗಿದೆ. ಆರಿಗೋ ಸಾಫ್ಟ್‌ವೇರ್ ಮೂಲ ಸೌಕರ್ಯ, ವಿದ್ಯುತ್ ಯೋಜನೆ, ರಸ್ತೆಗಳ ನಿರ್ಮಾಣ, ಬಂದರು ಕಾರ್ಯಾಚರಣೆ ನಿರ್ವಹಿಸುವಲ್ಲಿ ಸಹಾಯ ಮಾಡುವ ಬಿಸಿನೆಸ್ ಆಟೋಮೇಷನ್ ಪರಿಹಾರಗಳನ್ನು ನೀಡುವ ಸಂಸ್ಥೆಯಾಗಿದೆ. ಸಂಸ್ಥೆ ಕುರಿತು ಹೆಚ್ಚಿನ ವಿವರಗಳಿಗೆ www.aurigo.com ರಲ್ಲಿ ಸಂದರ್ಶಿಸಿ. ಮೈಕ್ರೋಸಾಫ್ಟ್ ಡೈನಾಮಿಕ್ಸ್ ಸಾಫ್ಟ್‌ವೇರ್ ಕುರಿತು ಹೆಚ್ಚಿನ ವಿವರಗಳಿಗೆ http://www.microsoft.com/india/dynamics ರಲ್ಲಿ ಸಂದರ್ಶಿಸಿ.